**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 313/2020**

| | | | |
|---|---|---|---|
| **ಹೆಸರು** | **:** | **ಅಮೃತ** | **ದೋ.ಸಾ. 5** |
| **ತಂದೆಯ ಹೆಸರು** | **:** | **ಶರಣಪ್ಪ** | **ಪ್ರಾ.ಸಾ. 3** |
| **ವಯಸ್ಸು** | **:** | **41 ವರ್ಷ** | **ದಿನಾಂಕಃ 18-01-2023** |
| **ಉದ್ಯೋಗ** | **:** | **ಒಕ್ಕಲುತನ** | |
| **ವಾಸಸ್ಥಳ** | **:** | **ನರನಾಳ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-1 ಮತ್ತು 4 ನನಗೆ ಗೊತ್ತಿಲ್ಲ.

ಈಗ ನನಗೆ ತೋರಿಸಲಾದ ದಾಖಲೆಯಲ್ಲಿರುವ ಸಹಿ ನನ್ನದ್ದೆ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ಈಗ ನಿಪಿ-1(ಬಿ) ಎಂದು ಗುರುತಿಸಲಾಯಿತು.

ಈಗ್ಗೆ 2 ವರ್ಷದ ಹಿಂದೆ ನಾನು ಚಿಮ್ಮನಚೋಡನಿಂದ ನರನಾಳ ಗ್ರಾಮಕ್ಕೆ ಬೈಕಿನಲ್ಲಿ ಹೋಗುತ್ತಿದ್ದಾಗ ನಾಗರಾಳ ಕ್ರಾಸ್ ಹತ್ತಿರ ರಸ್ತೆಯಲ್ಲಿ ನನ್ನನ್ನು ತಡೆದು ನಿಲ್ಲಿಸಿದ ಪೋಲೀಸರು ಪಂಚನಾಮೆ ದಾಖಲೆ ಎಂದು ಹೇಳಿ ನಿಪಿ-1 ಮೇಲೆ ನನ್ನ ಸಹಿ ಪಡೆದರು.

ಈ ನನಗೆ ತೋರಿಸಿದ ದಾಖಲೆಯನ್ನು ಪೋಲೀಸರು ನನಗೆ ಓದಿ ಹೇಳಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿಲ್ಲ.

ಈಗ ನನಗೆ ತೋರಿಸಲಾದ ಫೋಟೊದಲ್ಲಿ ನನ್ನ ಭಾವ ಚಿತ್ರ ಇಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರರು ನಡೆಸಿರುವ ಪಂಚನಾಮೆಗೆ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕ 13-05-2019 ರಂದು ಕನಕಪೂರ-ಚಿಮ್ಮನಚೋಡು ಗ್ರಾಮಗಳ ಮದ್ಯೆ ಇರುವ

ಸಾರ್ವಜನಿಕ ರಸ್ತೆಯ ಎಡಭಾಗದಲ್ಲಿರುವ ರೇವಲಾ ತಾಂಡಾದ ಕ್ರಾಸ್ ಹತ್ತಿರ ಅಪಘಾತ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೋಲೀಸರು ನನ್ನ ಮತ್ತು ಚಾಸಾ-4 ರವರ ಸಮಕ್ಷಮ ಚಾಸಾ-1 ರವರು ತೋರಿಸಿದಂತೆ ಪೊಲೀಸರು ಸ್ಥಳ ಪಂಚನಾಮೆಯನ್ನು ಬರೆದರು ಎನ್ನುವುದು ಸರಿಯಲ್ಲ.

ನಿಪಿ-1 ರ ದಾಖಲೆಯನ್ನು ಪೋಲೀಸರು ನನಗೆ ಓದಿ ಹೇಳಿದ್ದರು ಎನ್ನುವುದು ಸರಿಯಲ್ಲ. ಪೋಲೀಸರು ನನ್ನ ಸಮಕ್ಷಮ ನಿಪಿ-1 ರ ಪಂಚನಾಮೆಯನ್ನು ಜರುಗಿಸಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಸಲುವಾಗಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಜೆ.ಹೆಚ್.ಜಿ. ವಕೀಲರಿಂದಃ ಇಲ್ಲಾ**

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**